1. ವಿಗ್ರಹಾರಾಧನೆ ಮತ್ತು ಬಾಲ್ಯವಿವಾಹದ ವಿರುದ್ಧ ಸ್ವಾಮಿ ದಯಾನಂದ ಸರಸ್ವತಿ ನೇತೃತ್ವದಲ್ಲಿನ ಸುಧಾರಣಾ ಚಳುವಳಿ

   A) ಸತ್ಯಶೋಧಕ ಸಮಾಜ
   B) ಪ್ರಾರ್ಥನಾ ಸಮಾಜ
   C) ಆರ್ಯ ಸಮಾಜ
   D) ಹಿತಕಾರಿಣಿ ಸಮಾಜ

2. ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಿ ಪ್ರಮುಖ ಸುದ್ದಿ ಪತ್ರಿಕೆಗಳಲ್ಲಿ ಒಂದಾಗಿದ್ದ 'ವಾಯ್ಸ್ ಆಫ್ ಇಂಡಿಯಾ'ವನ್ನು ಸ್ಥಾಪಿಸಿದವರು ಯಾರು ?

   A) ದಾದಾಬಾಯಿ ನವರೋಜಿ
   B) ಸುರೇಂದ್ರನಾಥ್ ಬ್ಯಾನರ್ಜಿ
   C) ಲಾಲಾ ಲಜಪತ್ ರಾಯ್
   D) ಬಾಲ ಗಂಗಾಧರ್ ತಿಲಕ್

3. ಭಾರತೀಯ ರಾಷ್ಟ್ರೀಯ ಸೇನೆ (INA) ಯನ್ನು ರೂಪಿಸಿದವರು ಯಾರು ?

   A) ಸುಭಾಸ್‌ಚಂದ್ರ ಬೋಸ್
   B) ಜಯಪ್ರಕಾಶ್ ನಾರಾಯಣ್
   C) ಚಂದ್ರಶೇಖರ್ ಆಜ಼ಾದ್
   D) ರಾಸ್ ಬಿಹಾರಿ ಬೋಸ್

4. ಈ ಕೆಳಗಿನವುಗಳಿಂದ 1920ರ ಅಸಹಕಾರ ಸಮರ ಕಾಲದಲ್ಲಿ ನಿರ್ಮಾಣ ಚಟುವಟಿಕೆಗಳಿಗೆ ಸಂಬಂಧಿಸದೆ ಇದ್ದವುಗಳನ್ನು ಆಯ್ಕೆ ಮಾಡಿ.

   i) ದೇಶೀಯ ಶಾಲೆಗಳನ್ನು ಪ್ರಾರಂಭಿಸುವುದು
   ii) ತೆರಿಗೆಗಳನ್ನು ಪಾವತಿಸುವುದು
   iii) ಸ್ವದೇಶೀಯ ವಸ್ತುಗಳನ್ನು ಉತ್ಪಾದಿಸುವುದು
   iv) ಹಿಂದಿಯನ್ನು ಪ್ರಚಾರಮಾಡುವುದು.

   A) i ಮತ್ತು iii
   B) ii ಮಾತ್ರ
   C) iv ಮಾತ್ರ
   D) iii ಮತ್ತು iv

5. ಗಾಂಧೀಜಿ ಮುಂದಾಳತ್ವದ 1942ರ ಬಹುಜನ ಚಳುವಳಿ

   A) ಚಂಪಾರನ್ ಸತ್ಯಾಗ್ರಹ
   B) ಅಸಹಕಾರ ಚಳುವಳಿ
   C) ನಿಯಮೋಲ್ಲಂಘನಾ ಚಳುವಳಿ
   D) ಕ್ವಿಟ್ ಇಂಡಿಯಾ ಚಳುವಳಿ

6. ಪ್ರಥಮ ಪಂಚವಾರ್ಷಿಕ ಯೋಜನೆಯ ಉದ್ದೇಶಗಳು

   A) ಬಡತನ ನಿವಾರಣೆ
   B) ಕೈಗಾರಿಕಾ ಅಭಿವೃದ್ಧಿ
   C) ಕೃಷಿ ವಲಯದ ಸಮಗ್ರ ಅಭಿವೃದ್ಧಿ
   D) ಸುಸ್ಥಿರ ಅಭಿವೃದ್ಧಿ

7. ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯ ಅವಧಿ

   A) 1997 – 2002
   B) 2002 – 2007
   C) 2007 – 2012
   D) 2012 – 2017

8. 'ನ್ಯಾಶನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ'ದ ಪ್ರಧಾನ ಕಚೇರಿ
   A) ನವದೆಹಲಿ B) ಭೋಪಾಲ್ C) ಮುಂಬೈ D) ಜೈಪುರ್

9. ಸ್ವತಂತ್ರ ಭಾರತದ ಮೊದಲ ಶಿಕ್ಷಣ ಆಯೋಗ
   A) ಕೊಠಾರಿ ಆಯೋಗ
   B) ರಾಧಾಕೃಷ್ಣನ್ ಆಯೋಗ
   C) ಲಕ್ಷ್ಮಣಸ್ವಾಮಿ ಮುದಲಿಯಾರ್ ಆಯೋಗ
   D) ಮೇಲಿನ ಯಾವುದೂ ಅಲ್ಲ

10. ಪಂಚಶೀಲ ತತ್ತ್ವಗಳಿಗೆ ಸಹಿ ಹಾಕಿದ ಭಾರತದ ಪ್ರಧಾನ ಮಂತ್ರಿ
   A) ಜವಾಹರ್‌ಲಾಲ್ ನೆಹರೂ
   B) ಲಾಲ್ ಬಹದ್ದೂರ್ ಶಾಸ್ತ್ರಿ
   C) ಮೊರಾರ್ಜಿ ದೇಸಾಯಿ
   D) ಚಂದ್ರಶೇಖರ್

11. ಮೂರು ಹಂತಗಳ ಪಂಚಾಯತಿ ಸಂವಿಧಾನದಲ್ಲಿ ಗ್ರಾಮ ಪಂಚಾಯತಿಯ ಯೋಜನೆಗಳನ್ನು ಮೌಲ್ಯಮಾಪನ ಮಾಡಿ ಆದ್ಯತೆಯ ಆಧಾರದಲ್ಲಿ ಜಿಲ್ಲಾ ಮಟ್ಟಕ್ಕೆ ಸಲ್ಲಿಸುವ ಮಟ್ಟ ಯಾವುದು ?
   A) ಗ್ರಾಮ ಪಂಚಾಯತ್
   B) ಬ್ಲಾಕ್ ಪಂಚಾಯತ್
   C) ಜಿಲ್ಲಾ ಪಂಚಾಯತ್
   D) ಮೇಲಿನ ಯಾವುದೂ ಅಲ್ಲ

12. ಕೇರಳದ ಅಧಿಕೃತ ಹಣ್ಣು
   A) ಮಾವು B) ಹಲಸು C) ಪಪ್ಪಾಯ D) ಸೇಬು

13. ಕೇರಳದ ಏಕೈಕ ಸೇನಾವಸತಿ (ಕಂಟೋನ್ಮೆಂಟ್) ಎಲ್ಲಿದೆ ?
   A) ಕಣ್ಣೂರು B) ಕೋಳಿಕ್ಕೋಡ್ C) ಕೊಲ್ಲಂ D) ತಿರುವನಂತಪುರಂ

14. ಕೇರಳದ ಜೀವನಾಡಿ (ಜೀವರೇಖಾ) ಎಂದು ಕರೆಯಲಾಗುವ ನದಿ
   A) ಭಾರತಪುಳ್ಳ (ಭಾರತ ಹೊಳೆ)
   B) ಚಲಿಯಾರ್
   C) ಪೆರಿಯಾರ್
   D) ಪಂಪಾ

15. ಕೇರಳದ ಪ್ರಸ್ತುತ ಉಪಸಭಾಪತಿ
   A) ಎಂ.ಬಿ. ರಾಜೇಶ್
   B) ಡಾ. ಜಯರಾಜ್
   C) ವಿ.ಡಿ. ಸತೀಶನ್
   D) ಚಿತ್ತಯಂ ಗೋಪಕುಮಾರ್

16. ಕೇರಳ ರಾಜ್ಯದ ಕ್ರೀಡಾ ಸಚಿವ
   A) ರೋಶಿ ಅಗಸ್ಟಿನ್
   B) ಪಿ. ಪ್ರಸಾದ್
   C) ವಿ.ಎನ್. ವಾಸವನ್
   D) ವಿ. ಅಬ್ದುರಹಿಮಾನ್

17. ಕಮ್ಯೂನಿಟಿ ಪೋಲಿಸಿಂಗ್ ಕೇರಳ ಸರಕಾರದ ಉಪಕ್ರಮ

A) ಜನಮೈತ್ರಿ ಸುರಕ್ಷಾ
B) ಪಿಂಕ್ ಬೀಟ್
C) ನಿರ್ಭಯಾ
D) ಆಶಾಕಿರಣಂ

18. ಕೇರಳದ ಮೊದಲ ಸುದ್ದಿ ಪತ್ರಿಕೆ 'ರಾಜ್ಯಸಮಾಚಾರಂ' ಎಲ್ಲಿಂದ ಪ್ರಕಟಗೊಂಡಿತು ?

A) ಕಲ್ಲಿಯಶ್ಶೇರಿ
B) ತಲಶ್ಶೇರಿ
C) ಕೊಟ್ಟಾಯಂ
D) ಕೋಳಿಕ್ಕೋಡ್

19. ಕೇರಳದ ಪ್ರಥಮ ಮುಖ್ಯಮಂತ್ರಿ

A) ಇ.ಎಂ.ಎಸ್. ನಂಬೂತಿರಿಪಾಡ್
B) ಪಟ್ಟಮ್ ಥಾನು ಪಿಳ್ಳ
C) ಆರ್. ಶಂಕರ್
D) ಸಿ. ಅಚ್ಯುತ ಮೆನನ್

20. ರಾಜ್ಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಮಂತ್ರಿ

A) ಸಜಿ ಚೆರಿಯನ್
B) ಕೆ.ಎನ್. ಬಾಲಗೋಪಾಲ್
C) ಕೆ. ರಾಧಾಕೃಷ್ಣನ್
D) ಪಿ. ರಾಜೀವ್

21. 'ಕೇರಳ ಸಿಂಹಂ' ಎಂದು ಕರೆಯಲ್ಪಡುವವರು ಯಾರು ?

A) ವೇಲು ತಂಬಿ ದಲವ
B) ಕುಞಾಲಿ ಮರಕ್ಕಾರ್
C) ಷಕ್ತನ್ ತಂಪುರನ್
D) ಪಳಸ್ಸಿ ರಾಜಾ

22. ಆತ್ಮವಿದ್ಯಾ ಸಂಘದ ಸ್ಥಾಪಕ

A) ಸಹೋದರನ್ ಅಯ್ಯಪ್ಪನ್
B) ವಾಗ್ಭಟಾನಂದನ್
C) ಸುಭಾನಂದ ಗುರುದೇವನ್
D) ಆಗಮಾನಂದ ಸ್ವಾಮಿಗಳ್

23. ವೈಕಮ್ ಸತ್ಯಾಗ್ರಹ ಯಾವ ವರ್ಷ ಸಂಭವಿಸಿತು ?

A) 1921
B) 1924
C) 1931
D) 1934

24. 1930ರ ನಿಯಮೋಲ್ಲಂಘನಾ ಚಳುವಳಿಯ ಭಾಗವಾಗಿ ಕೆ. ಕೇಳಪ್ಪನ್ ನೇತೃತ್ವದಲ್ಲಿ ಉಪ್ಪಿನ ಕಾನೂನನ್ನು ಉಲ್ಲಂಘಿಸಿದ ಸ್ಥಳ

A) ಕೋಳಿಕ್ಕೋಡ್
B) ತಿರುವನಂತಪುರಂ
C) ಚೇರ್ತಲ
D) ಪಯ್ಯನ್ನೂರ್

25. 'ದೈವ ದಶಕಂ' ಎಂಬ ಕೃತಿಯನ್ನು ರಚಿಸಿದ ಸಮಾಜಸುಧಾರಕ ಯಾರು ?

A) ಚಟ್ಟಂಬಿ ಸ್ವಾಮಿಗಳ್
B) ಕುಮಾರ ಗುರುದೇವನ್
C) ಶ್ರೀ ನಾರಾಯಣ ಗುರು
D) ಸಹೋದರನ್ ಅಯ್ಯಪ್ಪನ್

26. ಕೆಳಗಿನವುಗಳಲ್ಲಿ ಭಾರತೀಯ ನಾಗರಿಕ ಸೇವೆಯ ಭಾಗವಲ್ಲದುದನ್ನು ಕಂಡುಹಿಡಿಯಿರಿ.
A) ರಾಜ್ಯಸೇವೆ
B) ಅಂತಾರಾಷ್ಟ್ರೀಯ ಸೇವೆ
C) ಅಖಿಲ ಭಾರತ ಸೇವೆ
D) ಕೇಂದ್ರ ಸೇವೆ

27. ಕೆಳಗಿನವುಗಳಲ್ಲಿ ಯಾವುದು ನಾಗರಿಕತೆ ಅನುಭೋಗ್ಯ ಹಕ್ಕುಗಳ ಪಟ್ಟಿಯೊಂದನ್ನು ಒಳಗೊಂಡು, 1928ರಲ್ಲಿ ಭಾರತೀಯ ಸ್ವಾತಂತ್ರ್ಯ ಚಳುವಳಿಯಿಂದ ಕರಡು (ಡ್ರಾಫ್ಟ್) ಮಾಡಲ್ಪಟ್ಟ ಸಂವಿಧಾನವನ್ನು ಹೋಲುತ್ತದೆ ?
A) ಬಾಂಬೆ ಯೋಜನೆ
B) ನೆಹರೂ ಸಮಿತಿ ವರದಿ
C) ಮೌಂಟ್ ಬ್ಯಾಟನ್ ಯೋಜನೆ
D) ಡಾ. ಅಂಬೇಡ್ಕರ್ ಸಮಿತಿ ವರದಿ

28. ಕೆಳಗಿನ ಯಾವ ಪರಿಕಲ್ಪನೆಗಳು ಭಾರತದ ಸಂವಿಧಾನದ ನಿರ್ದೇಶನ ತತ್ತ್ವಗಳಿಗೆ ಸಂಬಂಧಿಸಿವೆ ಎಂಬುದನ್ನು ಕಂಡುಹಿಡಿಯಿರಿ.
i) ಭಾರತವನ್ನು ಕಲ್ಯಾಣ ರಾಜ್ಯವನ್ನಾಗಿ ಮಾಡುವುದು ಇದರ ಗುರಿಯಾಗಿದೆ
ii) ಈ ನಿರ್ದೇಶನಗಳನ್ನು ರಕ್ಷಿಸಲು ನ್ಯಾಯಾಲಯಗಳನ್ನು ಸಂಪರ್ಕಿಸಬಹುದು
iii) ಇದು ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ವಿಚಾರಗಳನ್ನು ಒಳಗೊಂಡಿದೆ
iv) ಇವು ನೀತಿ ನಿರೂಪಣೆ ಮತ್ತು ಯೋಜನೆ ಅನುಷ್ಠಾನದಲ್ಲಿ ರಾಷ್ಟ್ರವು ಪರಿಗಣಿಸಬೇಕಾದ ಸಲಹೆಗಳು.
A) ಎಲ್ಲವೂ ಸರಿಯಾಗಿದೆ
B) ii ಮಾತ್ರ
C) i ಮತ್ತು iv ಮಾತ್ರ
D) i, iii ಮತ್ತು iv ಮಾತ್ರ

29. ಸಂವಿಧಾನದ ಹೃದಯ ಮತ್ತು ಆತ್ಮ ಎಂದು ಡಾ. ಅಂಬೇಡ್ಕರ್‌ರವರಿಂದ ಬಣ್ಣಿಸಲ್ಪಟ್ಟ ಯಾವ ಹಕ್ಕು ಭಾರತದ ಸಂವಿಧಾನದಲ್ಲಿನ ಮೂಲಭೂತ ಹಕ್ಕುಗಳಲ್ಲಿ ಅತ್ಯಂತ ಪ್ರಮುಖವಾಗಿದೆ ?
A) ಅಸ್ಪೃಶ್ಯತೆಯ ನಿರ್ಮೂಲನೆ
B) ಸ್ವಾತಂತ್ರ್ಯದ ಹಕ್ಕು
C) ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕುಗಳು
D) ಸಾಂವಿಧಾನಿಕ ಪರಿಹಾರಗಳ ಹಕ್ಕು

30. 1976 ರ ನಲವತ್ತೆರಡನೆಯ ತಿದ್ದುಪಡಿ ಕಾಯಿದೆಯ ಮೂಲಕ ಭಾರತ ಸಂವಿಧಾನಕ್ಕೆ ನಾಗರಿಕರ ಮೂಲಭೂತ ಕರ್ತವ್ಯಗಳನ್ನು ಸೇರಿಸಲಾಯಿತು. ಇವುಗಳನ್ನು ಸಂವಿಧಾನದ ಯಾವ ಭಾಗದಲ್ಲಿ ಸೇರಿಸಲಾಗಿದೆ ?
A) ಭಾಗ 4 A
B) ಭಾಗ 12 A
C) ಭಾಗ 4
D) ಭಾಗ 3

31. ಭಾರತದ ಪ್ರಮಾಣಿತ ರೇಖಾಂಶ
A) 86° 20' ಪೂರ್ವ ರೇಖಾಂಶ
B) 74° 22' ಪೂರ್ವ ರೇಖಾಂಶ
C) 135° ಪೂರ್ವ ರೇಖಾಂಶ
D) 82° 30' ಪೂರ್ವ ರೇಖಾಂಶ

32. ಭಾರತದ ಪೂರ್ವಾತಿಪೂರ್ವದ ರಾಜ್ಯ
A) ಗುಜರಾತ್
B) ಅರುಣಾಚಲ ಪ್ರದೇಶ
C) ತಮಿಳುನಾಡು
D) ಹಿಮಾಚಲ ಪ್ರದೇಶ

33. ಅರಬ್ಬೀ ಸಮುದ್ರದಲ್ಲಿರುವ ದ್ವೀಪ ಸಮೂಹ

A) ಲಕ್ಷದ್ವೀಪ

B) ಇಂಡೋನೇಶ್ಯಾ

C) ಅಂಡಮಾನ್ ಮತ್ತು ನಿಕೋಬಾರ್

D) ಮೆಡಗಾಸ್ಕರ್

34. ಪಶ್ಚಿಮ ಘಟ್ಟ ಮತ್ತು ಪೂರ್ವ ಘಟ್ಟಗಳು ಸಂಧಿಸುವ ಸ್ಥಳ

A) ನೀಲಗಿರಿ ಬೆಟ್ಟಗಳು

B) ಜವಾಡಿ ಬೆಟ್ಟಗಳು

C) ನಲ್ಲಮಲ ಬೆಟ್ಟಗಳು

D) ಅರಾವಳಿ ಬೆಟ್ಟಗಳು

35. ಈ ಕೆಳಗಿನವುಗಳಲ್ಲಿ ಭೂವೇಷ್ಟಿತ (ನೆಲಾವೃತ) ಭಾರತೀಯ ರಾಜ್ಯ ಯಾವುದು ?

A) ಮಹಾರಾಷ್ಟ್ರ B) ಪಶ್ಚಿಮ ಬಂಗಾಳ C) ಮಧ್ಯ ಪ್ರದೇಶ D) ಕೇರಳ

36. ಈ ಸರಣಿಯಲ್ಲಿ ಮುಂದಿನ ಸಂಖ್ಯೆ ಯಾವುದು ?

8, 18, 30, 40, 52, ?

A) 64 B) 60 C) 72 D) 62

37. ಸರಳಗೊಳಿಸಿ

$8 + 2 \times 3 - 12 \div 6 + 5 - 5 \times 2$

A) 4 B) 7 C) 6 D) 3

38. ರಾಮುನ ಪ್ರಸಕ್ತ ವಯಸ್ಸು ಅಮ್ಮುನ ವಯಸ್ಸಿನ ಎರಡು ಪಟ್ಟು ಇದೆ. ಹತ್ತು ವರ್ಷದ ಹಿಂದೆ ರಾಮುನ ವಯಸ್ಸು 36 ಆಗಿತ್ತು. ಹಾಗಾದರೆ ಅಮ್ಮುನ ಈಗಿನ ವಯಸ್ಸು ಎಷ್ಟು ?

A) 18 B) 28 C) 23 D) 26

39. ಗುಂಪಿಗೆ ಸೇರದ್ದನ್ನು ಕಂಡುಹಿಡಿಯಿರಿ.

567, 342, 246, 621

A) 246 B) 621 C) 567 D) 342

40. ರಾಣಿ 20 ಮೀ. ಉತ್ತರಕ್ಕೆ ನಡೆಯುತ್ತಾಳೆ. ಅನಂತರ ಆಕೆ ಬಲಕ್ಕೆ ತಿರುಗಿ 25 ಮೀ. ನಡೆಯುತ್ತಾಳೆ. ಅನಂತರ ಆಕೆ ಪುನಃ ಬಲಕ್ಕೆ ತಿರುಗಿ 18 ಮೀ. ನಡೆಯುತ್ತಾಳೆ. ಅನಂತರ ಆಕೆ ಎಡಕ್ಕೆ ತಿರುಗಿ 13 ಮೀ. ನಡೆಯುತ್ತಾಳೆ. ಈಗ ರಾಣಿಯು ಯಾವ ದಿಕ್ಕಿನಲ್ಲಿ ನಿಂತಿದ್ದಾಳೆ ?

A) ಉತ್ತರ B) ದಕ್ಷಿಣ C) ಪೂರ್ವ D) ಪಶ್ಚಿಮ

41. ಸ್ವತಂತ್ರ ಭಾರತದ ಮೊದಲ ಅರಣ್ಯ ನೀತಿಯನ್ನು ಯಾವ ವರ್ಷದಲ್ಲಿ ಘೋಷಿಸಲಾಯಿತು ?
A) 1947 B) 1961 C) 1952 D) 1988

42. ಕೇರಳದ ಮೊದಲ ಹುಲಿ ಸಂರಕ್ಷಿತ ಪ್ರದೇಶ
A) ಪರಂಬಿಕುಳಂ B) ಪೆರಿಯಾರ್ C) ನೆಯ್ಯಾರ್ D) ವಯನಾಡ್

43. ಭಾರತೀಯ ಕಾಡುಹೋರಿಯನ್ನು(Indian gaur) ವನ್ಯಜೀವಿ (ಸಂರಕ್ಷಣೆ) ಕಾಯಿದೆ (1972)ರ ಯಾವ ಶೆಡ್ಯೂಲ್ ಅಡಿಯಲ್ಲಿ ಸಂರಕ್ಷಿಸಲಾಗಿದೆ ?
A) ಶೆಡ್ಯೂಲ್ I B) ಶೆಡ್ಯೂಲ್ II C) ಶೆಡ್ಯೂಲ್ III D) ಶೆಡ್ಯೂಲ್ IV

44. ಅರಣ್ಯಗಳ ನಿರ್ವಹಣೆಗಾಗಿ ಸಿದ್ಧಪಡಿಸಲಾದ ಕಾರ್ಯಯೋಜನೆಯ ಅವಧಿ
A) 5 ವರ್ಷಗಳು B) 10 ವರ್ಷಗಳು C) 15 ವರ್ಷಗಳು D) 1 ವರ್ಷ

45. ಇವುಗಳಲ್ಲಿ ಯಾವುದು ಜಾಗತಿಕ ತಾಪಮಾನಕ್ಕೆ ಕಾರಣವಾಗುವ ಹಸಿರುಮನೆ ಅನಿಲಗಳಲ್ಲಿ ಇಲ್ಲ ?
A) ಕಾರ್ಬನ್ ಡೈಆಕ್ಸೈಡ್ B) ಮಿಥೇನ್ C) ಆಕ್ಸಿಜನ್ D) ನೈಟ್ರಸ್ ಆಕ್ಸೈಡ್

46. ಭಾರತದ ಮೊದಲ ತೇಗದ ತೋಟವಾದ ಕನೋಲಿ ಪ್ಲಾಟ್ ಎಲ್ಲಿದೆ ?
A) ವಯನಾಡ್ B) ತೇಕ್ಕಡಿ C) ನಿಲಂಬೂರ್ D) ತಿರುವನಂತಪುರಂ

47. ಕಾಡ್ಗಿಚ್ಚನ್ನು ತಡೆಗಟ್ಟುವ ಚಟುವಟಿಕೆಗಳ ಭಾಗವಾಗಿ ಕಾಡಿನ ಒಳಗೆ ಮತ್ತು ಗಡಿಗಳಲ್ಲಿ ತೋರಿಸಿರುವ ಅಗ್ನಿ ಪಥದ ಅಗಲ ಎಷ್ಟು?
A) 5.0 m B) 5.1 m C) 5.2 m D) 5.5 m

48. ಕೇರಳದ ಪಶ್ಚಿಮ ಘಟ್ಟ ಪರ್ವತ ಪ್ರದೇಶದಲ್ಲಿ ಹುಟ್ಟಿ ಪೂರ್ವಕ್ಕೆ ಹರಿಯುವ ನದಿ
A) ಪೆರಿಯಾರ್ B) ಪಂಪಾ
C) ಕಬಿನಿ D) ಭಾರತಪುಳ್ಹ (ಭಾರತ ಹೊಳೆ)

49. ಕೇರಳದ ಮೊದಲ ರಾಷ್ಟ್ರೀಯ ಉದ್ಯಾನವನ
A) ಸೈಲೆಂಟ್ ವ್ಯಾಲಿ B) ಇರವಿಕುಳಂ
C) ಪಾಂಪಾಡುಮ್ ಚೋಲ D) ಮತಿಕೆಟ್ಟಾನ್ ಚೋಲ

50. ಕೇರಳದ ಆರ್ದ್ರ ಪತನಶೀಲ ಕಾಡುಗಳಲ್ಲಿ ಕಂಡುಬರುವ ಮರಗಳೆಂದರೆ
i) ಅರ್ಜುನ್ ಮರ (ಟರ್ಮಿನೇಲಿಯಾ ಅರ್ಜುನ (ಮರುದ)
ii) ಮಲಬಾರ್ ಕಬ್ಬಿಣದ ಮರ (ಹೋಪಿಯ ಪರ್ವಿಫ್ಲೋರಾ) (ಕಂಬಕಮ್)
iii) ಬೀಟೆ ಮರ (ದಲ್ಬೆರ್ಜಿಯಾ ಲಾಟಿಫೋಲಿಯಾ)
iv) ತೇಗದ ಮರ (ಟೆಕ್ಟೋನಾ ಗ್ರಾಂಡಿಸ್)
A) i ಮತ್ತು ii ಮಾತ್ರ B) i, iii ಮತ್ತು iv ಮಾತ್ರ
C) ii, iii ಮತ್ತು iv ಮಾತ್ರ D) i ಮತ್ತು iv ಮಾತ್ರ

51. 1972ರ ವನ್ಯಜೀವಿ (ಸಂರಕ್ಷಣೆ) ಕಾಯ್ದೆಯ ಶೆಡ್ಯೂಲ್ Iರ ಅಡಿಯಲ್ಲಿ ಈ ಕೆಳಗಿನ ಯಾವ ವನ್ಯಜೀವಿಗಳನ್ನು ಸಂರಕ್ಷಿಸಲಾಗುತ್ತದೆ ?

i) ಆನೆ

ii) ಜಿಂಕೆ

iii) ಭಾರತೀಯ ಕಾಡುಹೋರಿ (Indian Gaur)

iv) ಹುಲಿ

A) i ಮತ್ತು iii ಮಾತ್ರ
B) i, ii ಮತ್ತು iv ಮಾತ್ರ
C) i, iii ಮತ್ತು iv ಮಾತ್ರ
D) i ಮತ್ತು iv ಮಾತ್ರ

52. ಯಾವ ದಿನವನ್ನು ವಿಶ್ವ ಪರಿಸರ ದಿನವೆಂದು (World Environmental Day) ಆಚರಿಸಲಾಗುತ್ತದೆ ?

A) ಮಾರ್ಚ್ 21
B) ಜೂನ್ 5
C) ಜುಲೈ 7
D) ಡಿಸೆಂಬರ್ 25

53. ಕೇರಳದಲ್ಲಿ ಅತ್ಯಂತ ಸಾಮಾನ್ಯವಾಗಿ ಕಂಡುಬರುವ ಅರಣ್ಯ ಪ್ರಕಾರ (forest type)

A) ನಿತ್ಯಹರಿದ್ವರ್ಣ ಕಾಡುಗಳು
B) ಆರ್ದ್ರ ಪತನಶೀಲ ಕಾಡುಗಳು
C) ಚೋಲ ಕಾಡುಗಳು
D) ಮುಳ್ಳಿನ ಕಾಡುಗಳು

54. ಕೇರಳದಲ್ಲಿ ತೇಗದ ತೋಟಗಳಲ್ಲಿ ಗಿಡಗಳನ್ನು ನೆಡಲು ವ್ಯಾಪಕವಾಗಿ ಬಳಸಲಾಗುವ ಮೂಲವಸ್ತು (Planting material)

i) ಕೂಡತ್ತೈ

ii) ಮೂಲ ತರಬೇತುದಾರ ಮೊಳಕೆ (ರೂಟ್ ಟ್ರೈನರ್ ತೈ)

iii) ಒಂದು ವರ್ಷ ಪ್ರಾಯದ ಮೊಳಕೆ

A) i ಮಾತ್ರ
B) ii ಮಾತ್ರ
C) iii ಮಾತ್ರ
D) ಮೇಲಿನ ಎಲ್ಲವೂ (i, ii ಮತ್ತು iii)

55. ಅರಣ್ಯ ಪ್ರದೇಶಗಳಲ್ಲಿ ಮಣ್ಣು ನೀರಿನ ಸಂರಕ್ಷಣೆಗಾಗಿ ಈ ಕೆಳಗಿನವುಗಳನ್ನು ನಿರ್ಮಿಸಲಾಗಿದೆ.

i) ಮಳೆ ಗಟಾರಗಳು

ii) ಗಲ್ಲಿ ಪ್ಲಗ್ಗಿಂಗ್

iii) ಚೆಕ್ ಡ್ಯಾಂಗಳು

A) i ಮಾತ್ರ
B) ii ಮಾತ್ರ
C) iii ಮಾತ್ರ
D) ಮೇಲಿನ ಎಲ್ಲವೂ (i, ii ಮತ್ತು iii)

56. ಕೇರಳದಲ್ಲಿ ಕಂಡುಬರುವ ಪ್ರಾಕ್ತನ ಗೋತ್ರ ಪಂಥಗಳು

i) ಚೋಳ ನಾಯ್ಕರ್

ii) ಪನಿಯರ್

iii) ಕಾಡರ್

iv) ಮುದುವಾನ್

A) i ಮತ್ತು ii ಮಾತ್ರ
B) i ಮತ್ತು iii ಮಾತ್ರ
C) ii ಮತ್ತು iv ಮಾತ್ರ
D) iii ಮತ್ತು iv ಮಾತ್ರ

57. ಬುಡಕಟ್ಟು ಅರಣ್ಯ ಹಕ್ಕು ಕಾಯಿದೆ (2006)ರ ಅಡಿಯಲ್ಲಿ ರಚಿಸಲಾದ ಸಮಿತಿ

A) ಗ್ರಾಮಸಭಾ
B) ಅರಣ್ಯ ಹಕ್ಕು ಸಮಿತಿ
C) ಅರಣ್ಯ ಸಂರಕ್ಷಣಾ ಸಮಿತಿ
D) ವಾರ್ಡ್‌ಮಟ್ಟದ ಸಮಿತಿ

58. ಕೇರಳದಲ್ಲಿ ಅತಿ ಹೆಚ್ಚು ಬುಡಕಟ್ಟು ಜನಸಂಖ್ಯೆ ಇರುವ ಜಿಲ್ಲೆ

A) ಇಡುಕ್ಕಿ
B) ವಯನಾಡ್
C) ಕಾಸರಗೋಡು
D) ಪಾಲಕ್ಕಾಡ್

59. ಬುಡಕಟ್ಟು ಅರಣ್ಯ ಹಕ್ಕುಗಳ ಕಾಯ್ದೆ(2006) ರ ಅಡಿಯಲ್ಲಿ, ಈ ಕೆಳಗಿನ ಯಾವ ಹಕ್ಕುಗಳು ಅರಣ್ಯದಲ್ಲಿ ವಾಸಿಸುವ ಸಮೂಹಗಳಿಗೆ ಅರಣ್ಯದೊಳಗಿಂದ ಮರಗಳನ್ನು ಹೊರತುಪಡಿಸಿ ಅರಣ್ಯ ಸಂಪನ್ಮೂಲಗಳನ್ನು ಸಂಗ್ರಹಿಸುವ ಹಕ್ಕನ್ನು ನೀಡುತ್ತದೆ ?

i) ವೈಯಕ್ತಿಕ ಅರಣ್ಯ ಹಕ್ಕುಗಳು

ii) ಸಾಮೂಹಿಕ ಅರಣ್ಯ ಹಕ್ಕುಗಳು

iii) ಅಭಿವೃದ್ಧಿಯ ಹಕ್ಕು

A) i ಮಾತ್ರ
B) ii ಮಾತ್ರ
C) iii ಮಾತ್ರ
D) ಮೇಲಿನ ಎಲ್ಲವೂ (i, ii ಮತ್ತು iii)

60. ಅರಣ್ಯ ಸಂರಕ್ಷಣಾ ಸಮಿತಿಯ ಸಾಮಾನ್ಯ ಸಭೆಯ ಹಾಜರಾತಿಯು ಒಟ್ಟು ಸದಸ್ಯರ ____________ ರಷ್ಟು ಇರಬೇಕು.

A) ಅರ್ಧ
B) ಮೂರನೇ ಒಂದು
C) ಮೂರನೇ ಎರಡು
D) ನಾಲ್ಕನೇ ಒಂದು

61. ವನ್ಯಜೀವಿಗಳ ದಾಳಿಯಿಂದ ಅಪಘಾತ ಸಂಭವಿಸಿದಾಗ ವೈದ್ಯಕೀಯ ಧನ ಸಹಾಯವಾಗಿ ಪಡೆಯಬಹುದಾದ ಪ್ರಸ್ತುತ ಗರಿಷ್ಠ ಮೊತ್ತ ಎಷ್ಟು ?

A) 0.50 ಲಕ್ಷ
B) 0.75 ಲಕ್ಷ
C) 1.0 ಲಕ್ಷ
D) 1.50 ಲಕ್ಷಗಳು

62. ಮಾನವ ವನ್ಯಜೀವಿ ಸಂಘರ್ಷವನ್ನು ತಡೆಗಟ್ಟುವ ಭಾಗವಾಗಿ ಅರಣ್ಯಗಳ ಗಡಿಯಲ್ಲಿ ಏನನ್ನು ನಿರ್ಮಿಸಲಾಗಿದೆ ?
i) ಸೌರ ಬೇಲಿ
ii) ಆನೆ ಪ್ರತಿರೋಧ ಕಂದಕ
iii) ಮುಳ್ಳುತಂತಿ ಬೇಲಿ
iv) ರೈಲು ಬೇಲಿ
A) i, ii ಮತ್ತು iii ಮಾತ್ರ
B) i, iii ಮತ್ತು iv ಮಾತ್ರ
C) i, ii ಮತ್ತು iv ಮಾತ್ರ
D) ii, iii ಮತ್ತು iv ಮಾತ್ರ

63. ಬೆಂಕಿಕಡ್ಡಿಗಳನ್ನು ತಯಾರಿಸಲು ಬಳಸುವ ಮರ
A) ತೇಗ
B) ಮಲಬಾರ್ ರೇಷ್ಮೆ ಹತ್ತಿ ಮರ (ಇಲವು)
C) ಬೀಟೆ ಮರ
D) ಡಯೋಸ್ಪೈರೋಸ್ ಕ್ಯಾಂಡೋಲಿಯಾನಾ (ಕರಿಮರ)

64. ಕೈಸನೂರ್ ಎಂಬ ಅರಣ್ಯ ಕಾಯಿಲೆಯು ಯಾವುದರಿಂದ ಹರಡುತ್ತದೆ ?
A) ಸೊಳ್ಳೆ
B) ಮಂಗ
C) ಅಳಿಲು
D) ಕಾಡುಹಂದಿ

65. ಸಹಭಾಗಿತ್ವದ ಅರಣ್ಯ ನಿರ್ವಹಣೆಯಲ್ಲಿ, ಅರಣ್ಯ ಸಂರಕ್ಷಣಾ ಸಮಿತಿ/ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಆಯ್ಕೆ ಮಾಡುವ ಸಾಮಾನ್ಯ ಸಭೆಯಲ್ಲಿ ಯಾರು ಚುನಾವಣಾ ಅಧಿಕಾರಿಗಳಾಗಿರುತ್ತಾರೆ ?
A) ಡಿ. ಎಫ್. ಒ.
B) ರೇಂಜ್ ಅಧಿಕಾರಿ
C) ಅರಣ್ಯಾಧಿಕಾರಿ
D) ಫೋರೆಸ್ಟ್ ಗಾರ್ಡ್

66. ಅರಣ್ಯ ಅಭಿವೃದ್ಧಿ ಏಜೆನ್ಸಿಯ (ಎಫ್.ಡಿ.ಎ.) ಅಧ್ಯಕ್ಷರು ಯಾವ ಪ್ರಾಧಿಕಾರದ ಸ್ಥಾನವನ್ನು ಹೊಂದಿರುವ ಅಧಿಕಾರಿಯಾಗಿದ್ದಾರೆ ?
A) ಡಿ. ಎಫ್.ಒ.
B) ರೇಂಜ್ ಅಧಿಕಾರಿ
C) ಅರಣ್ಯಾಧಿಕಾರಿ
D) ಸಂರಕ್ಷಣಾಧಿಕಾರಿ

67. ಆದಿವಾಸಿಗಳ ಕುರುಂಬ ಎಂಬ ಪಂಗಡವು ಕೇರಳದ ಈ ಜಿಲ್ಲೆಯಲ್ಲಿ ಮಾತ್ರ ಕಾಣಸಿಗುತ್ತಾರೆ
A) ವಯನಾಡ್
B) ಪಾಲಕ್ಕಾಡ್
C) ಇಡುಕ್ಕಿ
D) ಕೋಟ್ಟಯಂ

68. ಈ ಕೆಳಗಿನ ಯಾವ ಪ್ರಾಣಿಗಳಿಂದ ಆಕ್ರಮಣದಲ್ಲಿ ಹತನಾದರೆ 1980ರ ರೂಲ್ಸ್ ಫಾರ್ ಕಾಂಪೆನ್‌ಸೇಶನ್ ಟು ದಿ ವಿಕ್ಟಿಮ್ಸ್ ಆಫ್ ವೈಲ್ಡ್ ಲೈಫ್ ಆ್ಯಟಾಕ್ ಪ್ರಕಾರ ನಷ್ಟ ಪರಿಹಾರವನ್ನು ಪಡೆಯಲು ಅರ್ಹನಾಗಿರುವುದಿಲ್ಲ ?
A) ಕಾಡುಹಂದಿ
B) ಆನೆ
C) ಜೇನು ನೊಣ
D) ಹುಲಿ

69. ಸಹಭಾಗಿತ್ವದ ಅರಣ್ಯ ನಿರ್ವಹಣೆಯಲ್ಲಿ (VSS) ವನ ಸಂರಕ್ಷಣಾ ಸಮಿತಿಗಳನ್ನು ಅನುಮೋದಿಸಲು/ ನೋಂದಣೆ ಮಾಡಲು ಯಾರು ಅಧಿಕಾರ ಹೊಂದುತ್ತಾರೆ ?
A) ಡಿ.ಎಫ್.ಒ.
B) ರಿಜಿಸ್ಟ್ರಾರ್
C) ರೇಂಜ್ ಅಧಿಕಾರಿ
D) ಸಂರಕ್ಷಣಾಧಿಕಾರಿ

70. ಬುಡಕಟ್ಟು ಅರಣ್ಯ ಹಕ್ಕು ಕಾಯ್ದೆಯಡಿ (2006) ಅಭಿವೃದ್ಧಿ ಉದ್ದೇಶಗಳಿಗಾಗಿ ಅರಣ್ಯ ಭೂಮಿಯನ್ನು ನೀಡಲು ಅಧಿಕಾರ ಹೊಂದಿರುವ ಅಧಿಕಾರಿ

A) ರೇಂಜ್ ಅಧಿಕಾರಿ
B) ಡಿ.ಎಫ್.ಒ.
C) ಸಂರಕ್ಷಣಾಧಿಕಾರಿ
D) ಮುಖ್ಯ ಸಂರಕ್ಷಣಾಧಿಕಾರಿ

71. ಕೇಂದ್ರ ಅರಣ್ಯ ರಕ್ಷಣೆ (ಸಂರಕ್ಷಣೆ) ಕಾಯ್ದೆ ಯಾವ ವರ್ಷದಲ್ಲಿ ಜಾರಿಗೆ ಬಂತು ?

A) 1961
B) 1972
C) 1980
D) 2006

72. ಕೇರಳ ಅರಣ್ಯ ಕಾಯ್ದೆ (1961)ರ ಅಡಿಯಲ್ಲಿ ಕೆಳಗಿನ ಅಧಿಕಾರಿಗಳನ್ನು 'ಅರಣ್ಯಾಧಿಕಾರಿಗಳು' ಎಂದು ವ್ಯಾಖ್ಯಾನಿಸಲಾಗುತ್ತದೆ

i) ಡಿ.ಎಫ್.ಒ.
ii) ರೇಂಜರ್
iii) ಅರಣ್ಯಾಧಿಕಾರಿ
iv) ವೀಕ್ಷಕ

A) i ಮತ್ತು ii
B) i, ii ಮತ್ತು iii
C) ii, iii ಮತ್ತು iv
D) ಮೇಲಿನ ಎಲ್ಲವೂ (i, ii, iii ಮತ್ತು iv)

73. ಕೇರಳ ಅರಣ್ಯ ಕಾಯಿದೆ (1961)ಯ ಯಾವ ಸೆಕ್ಷನ್ ಅಡಿಯಲ್ಲಿ ಅರಣ್ಯದಲ್ಲಿ ಅಪರಾಧದಲ್ಲಿ ಭಾಗಿಯಾಗಿರುವ ವಸ್ತುಗಳನ್ನು (mainours) ಮುಟ್ಟುಗೋಲು ಹಾಕುವ ಸಲುವಾಗಿ ವಶಕ್ಕೆ ಪಡೆಯಲು ಸರಕಾರಕ್ಕೆ ಅಧಿಕಾರ ನೀಡುತ್ತದೆ ?

A) ಸೆಕ್ಷನ್ 27
B) ಸೆಕ್ಷನ್ 61A
C) ಸೆಕ್ಷನ್ 61B
D) ಸೆಕ್ಷನ್ 44

74. ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಅಡಿಯಲ್ಲಿ ಬೇಟೆಯನ್ನು ನಿಷೇಧಿಸುವ ಸೆಕ್ಷನ್

A) ಸೆಕ್ಷನ್ 2
B) ಸೆಕ್ಷನ್ 9
C) ಸೆಕ್ಷನ್ 44
D) ಸೆಕ್ಷನ್ 52

75. ವನ್ಯಜೀವಿ ಸಂರಕ್ಷಣಾ ಕಾಯ್ದೆ, 1972ರ ಯಾವ ಶೆಡ್ಯೂಲ್ ಅಡಿಯಲ್ಲಿ ಕಾಡುಹಂದಿ (wild boar) ಗಳನ್ನು ರಕ್ಷಿಸಲಾಗುತ್ತದೆ ?

A) ಶೆಡ್ಯೂಲ್ I
B) ಶೆಡ್ಯೂಲ್ II
C) ಶೆಡ್ಯೂಲ್ III
D) ಶೆಡ್ಯೂಲ್ IV

76. ಪರಿಶಿಷ್ಟ ಪಂಗಡಗಳು ಮತ್ತು ಇತರ ಸಾಂಪ್ರದಾಯಿಕ ಅರಣ್ಯವಾಸಿಗಳು (ಅರಣ್ಯ ಹಕ್ಕುಗಳ ಗುರುತಿಸುವಿಕೆ) ಕಾಯ್ದೆ (2006) ಅಥವಾ ಅರಣ್ಯ ಹಕ್ಕುಗಳ ಕಾಯ್ದೆ 2006ರ ಅಡಿಯಲ್ಲಿ ನೀಡಲಾಗಿರುವ ಪ್ರಮುಖ ಅರಣ್ಯ ಹಕ್ಕುಗಳು ಯಾವುವು ?

i) ವೈಯಕ್ತಿಕ ಅರಣ್ಯ ಹಕ್ಕುಗಳು
ii) ಸಾಮೂಹಿಕ ಅರಣ್ಯ ಹಕ್ಕುಗಳು
iii) ಅಭಿವೃದ್ಧಿಯ ಹಕ್ಕು
iv) ಪೇಟೆಂಟ್ ಹಕ್ಕುಗಳು

A) i ಮತ್ತು ii ಮಾತ್ರ
B) i ಮತ್ತು iii ಮಾತ್ರ
C) i, ii ಮತ್ತು iii ಮಾತ್ರ
D) ಮೇಲಿನ ಎಲ್ಲವೂ (i, ii, iii ಮತ್ತು iv)

77. ಕ್ರಿಮಿನಲ್ ಪ್ರಕರಣಗಳಲ್ಲಿ ಅಂತಿಮ ಮೇಲ್ಮನವಿಗಾಗಿ ಯಾವ ನ್ಯಾಯಾಲಯವನ್ನು ಸಂಪರ್ಕಿಸಬೇಕು ?

A) ಜಿಲ್ಲಾ ನ್ಯಾಯಾಲಯ
B) ಉಚ್ಚ ನ್ಯಾಯಾಲಯ
C) ಸರ್ವೋಚ್ಚ ನ್ಯಾಯಾಲಯ
D) ಮುನ್ಸಿಫ್ ನ್ಯಾಯಾಲಯ

78. ಖಾಸಗಿ ಒಡೆತನದ ಅರಣ್ಯಗಳನ್ನು ಸರಕಾರಕ್ಕೆ ವಹಿಸಲು ಕೇರಳದಲ್ಲಿ ಖಾಸಗಿ ಅರಣ್ಯ (ವೆಸ್ಟಿಂಗ್ ಮತ್ತು ಅಸೈನ್‌ಮೆಂಟ್) ಕಾಯ್ದೆ ಯಾವ ವರ್ಷದಲ್ಲಿ ಅಸ್ತಿತ್ವಕ್ಕೆ ಬಂದಿತು ?

A) 1947
B) 1971
C) 1980
D) 2006

79. ಕೇರಳ ಅರಣ್ಯ ಕಾಯಿದೆ (1961) ಯ ಯಾವ ಪರಿಚ್ಛೇದದ ಅಡಿಯಲ್ಲಿ ಸರಕಾರವು ಒಂದು ಪ್ರದೇಶವನ್ನು ಮೀಸಲು ಅರಣ್ಯವೆಂದು ಘೋಷಿಸಲು ಉದ್ದೇಶಿಸಿದೆ ಎಂಬ ಅಧಿಸೂಚನೆಯನ್ನು ಹೊರಡಿಸಿದೆ ?

A) ಪರಿಚ್ಛೇದ 4
B) ಪರಿಚ್ಛೇದ 7
C) ಪರಿಚ್ಛೇದ 19
D) ಪರಿಚ್ಛೇದ 52

80. ಅರಣ್ಯ ಕಾಯ್ದೆಯ ಅಡಿಯಲ್ಲಿ ಅಪರಾಧ ಸಾಬೀತಾದರೆ ಪ್ರಥಮ ಮಾಹಿತಿ ವರದಿ (Forum I Report) ಯನ್ನು ಯಾವ ನ್ಯಾಯಾಲಯಕ್ಕೆ ಸಲ್ಲಿಸಬೇಕು ?

A) ಮ್ಯಾಜಿಸ್ಟ್ರೇಟ್ ನ್ಯಾಯಾಲಯ
B) ಜಿಲ್ಲಾ ನ್ಯಾಯಾಲಯ
C) ಉಪ ನ್ಯಾಯಾಲಯ
D) ಉಚ್ಚ ನ್ಯಾಯಾಲಯ

81. ಕೇರಳದ ಏಕ ಕಮ್ಯೂನಿಟಿ ರಿಸರ್ವ್ ಯಾವುದು ?

A) ಕೊಟ್ಟಿಯೂರ್
B) ಕರಿಂಪುಳ
C) ಕಡಲುಂಡಿ-ವಳ್ಳಿಕುನ್ನ
D) ಚುಳನೂರ್

82. ಕೇರಳದ ಅತ್ಯಂತ ಚಿಕ್ಕದಾದ ವನ್ಯಜೀವಿ ಅಭಯಾರಣ್ಯ ಯಾವುದು ?

A) ಮಂಗಳವನಂ
B) ಚಿನ್ನಾರ್
C) ತಟ್ಟೇಕಾಡ್
D) ಚುಳನೂರ್

83. ಕನ್ನಿಮರ ತೇಗಕ್ಕೆ ಪ್ರಸಿದ್ಧವಾದ ವನ್ಯಜೀವಿ ಅಭಯಾರಣ್ಯ ಯಾವುದು ?

A) ಮಂಗಳವನಂ
B) ಪರಂಬಿಕುಳಂ
C) ಕಡಲುಂಡಿ-ವಳ್ಳಿಕುನ್ನ
D) ಚಿನ್ನಾರ್

84. ಭಾರತದ ಮೊದಲ ಯೋಜಿತ ಪರಿಸರ ಪ್ರವಾಸೋದ್ಯಮ (Eco-tourism) ಕೇಂದ್ರ ಯಾವುದು ?

A) ಕುರುವ ದ್ವೀಪ
B) ಪಾಲರುವಿ
C) ತೆನ್ಮಲ
D) ಪೆರಿಯಾರ್

85. ಕೇರಳದ ಅತ್ಯಂತ ಸಣ್ಣ ರಾಷ್ಟ್ರೀಯ ಉದ್ಯಾನವನ ಯಾವುದು ?

A) ಆನಮುಡಿ ಚೋಲ
B) ಪಾಂಪಾಡುಂ ಚೋಲ
C) ಮತಿಕೆಟ್ಟಾನ್ ಚೋಲ
D) ಇರವಿಕುಳಂ

86. ಕೇರಳದ ರಾಜ್ಯ ಚಿಟ್ಟೆ ಯಾವುದು ?

A) ಗರುಡ ಚಿಟ್ಟೆ

B) ಕೃಷ್ಣಶಲಭ

C) ನಾರಕ ಶಲಭ

D) ಬುದ್ಧ ಮಯೂರಿ

87. 1952ರಲ್ಲಿ ಭಾರತದಲ್ಲಿ ಘೋಷಿಸಲಾದ ಅಳಿವಿನ ಅಂಚಿನಲ್ಲಿರುವ ಪ್ರಭೇದ

A) ತೋಳ B) ಚೀತಾ C) ನರಿ (ಕುರುನರಿ) D) ಹಂಗುಲ್

88. ಕಾಡು ಕತ್ತೆ ಅಭಯಾರಣ್ಯ ಯಾವ ರಾಜ್ಯದಲ್ಲಿದೆ ?

A) ಮಹಾರಾಷ್ಟ್ರ B) ರಾಜಸ್ಥಾನ್ C) ಗುಜರಾತ್ D) ಮೇಘಾಲಯ

89. ಕೇರಳದಲ್ಲಿ ಕೊನೆಯದಾಗಿ ಸ್ಥಾಪಿಸಲಾಗಿರುವ ವನ್ಯಜೀವಿ ಅಭಯಾರಣ್ಯ

A) ಕರಿಂಪುಳ B) ಕೊಟ್ಟಿಯೂರ್ C) ಮಲಬಾರ್ D) ಕುರಿಞ ಮಲ್ಲೆ

90. ದಕ್ಷಿಣ ಭಾರತದ ಅತಿ ಎತ್ತರ ಶಿಖರವಾಗಿರುವ ಆನಮುಡಿ ಯಾವ ರಾಷ್ಟ್ರೀಯ ಉದ್ಯಾನದಲ್ಲಿ ನೆಲೆಯಾಗಿದೆ ?

A) ಮತಿಕೆಟ್ಟಾನ್ ಚೋಲ

B) ಆನಮುಡಿ ಚೋಲ

C) ಇರವಿಕುಳಂ

D) ಪೆರಿಯಾರ್

91. ಕೆಳಗಿನವುಗಳಲ್ಲಿ ಯಾವುದು ಕೇರಳದ ಸ್ಥಳೀಯ ಸಸ್ಯವಲ್ಲ ?

A) ಮರುದಿ

B) ಆನಿಲಿ

C) ನೀಲಗಿರಿ

D) ಉನ್ನಂ

92. ಕೇರಳದಲ್ಲಿ ನೈಸರ್ಗಿಕ ಅರಣ್ಯಗಳ ಮರುಸ್ಥಾಪನೆಗಾಗಿ ನೀತಿ ದಾಖಲೆಯನ್ನು ಅಂಗೀಕರಿಸಲಾದ ವರ್ಷ

A) 2022 B) 2021 C) 2001 D) 2019

93. ಮರದ ಬೀಜೋತ್ಪಾದನಾ ಸಾಮರ್ಥ್ಯವನ್ನು ನಿಯಂತ್ರಿಸುವ ಅಂಶಗಳು

i) ಮರದ ವಯಸ್ಸು

ii) ಮರದ ಆರೋಗ್ಯ

iii) ಹವಾಮಾನ

A) i ಮತ್ತು ii ಮಾತ್ರ

B) iii ಮಾತ್ರ

C) i, ii ಮತ್ತು iii

D) ಮೇಲಿನ ಯಾವುದೂ ಅಲ್ಲ

94. ಅರಣ್ಯ ತೋಟಗಾರಿಕೆ ನಿರ್ಮಾಣದ ಅನಂತರದ ಮೊದಲ ವರ್ಷಗಳಲ್ಲಿ ಅರಣ್ಯ ಬೆಳೆಗಳೊಂದಿಗೆ ಕೃಷಿ ಬೆಳೆಗಳನ್ನು ಬೆಳೆಯುವ ರೀತಿ

A) ಸಂಯೋಜಿತ ಕೃಷಿ ರೀತಿ
B) ಟೊಂಗಿಯ
C) ಕೃಷಿ ಅರಣ್ಯ (Farm Forestry)
D) ಆಗ್ರೋ ಅರಣ್ಯ

95. ಕೇರಳದಲ್ಲಿ ಕಂಡುಬರುವ ಅಧಿನಿವೇಶ (invasive) ಸಸ್ಯ

A) ಮುಟ್ಟಿದರೆ ಮುನಿ ಸಸ್ಯ (ಮಿಮೊಸಾ)
B) ನವಿಲು ಹೂವು (ರಾಜಮಲ್ಲಿ)
C) ಓಲಿಯಾಂಡರ್ (ಅರಳಿ)
D) ಪಶ್ಚಿಮ ಭಾರತ ಲಾಂಟಾನಾ (ಕೊಂಗಿಣಿ)

96. ಕೃತಕ ಪುನರುತ್ಪಾದನೆಯ ಉದ್ದೇಶ

A) ನೈಸರ್ಗಿಕ ಪುನರುತ್ಪಾದನೆಗೆ ಅನುಬಂಧವಾಗಿರುವುದು
B) ಅರಣ್ಯ ಭೂಮಿಯ ಉತ್ಪಾದನಾ ಕ್ಷಮತೆಯನ್ನು ಅಧಿಕಗೊಳಿಸುವುದು
C) ಪ್ರತ್ಯೇಕ ಅಗತ್ಯಗಳಿಗಾಗಿ ಸಂಪನ್ಮೂಲಗಳನ್ನು ಉತ್ಪಾದಿಸುವುದು
D) ಮೇಲಿನ ಎಲ್ಲವೂ

97. ಬೇರುಗಳ ಪ್ರಸರಣ (root sucker) ದಿಂದ ಪುನರುತ್ಪಾದನೆ ಮಾಡುವ ಮರ

A) ಆನಿಲಿ
B) ಶ್ರೀಗಂಧದ ಮರ
C) ಕಣಿಕೊನ್ನ
D) ಮರುದಿ

98. ಕೇರಳ ಅರಣ್ಯ ಬೀಜ (Kerala Forest Seed) ಕೇಂದ್ರವು ಎಲ್ಲಿದೆ ?

A) ಕೊನ್ನಿ
B) ನಿಲಂಬೂರ್
C) ಪೀಚಿ
D) ವಾಳಚಾಲ್

99. ತೇಗವನ್ನು ಬೆಳೆಯಲು ಸ್ಟಂಪ್ ಪ್ಲಾಂಟಿಂಗ್ ವಿಧಾನವನ್ನು ಯಶಸ್ವಿಯಾಗಿ ಅಭಿವೃದ್ಧಿಪಡಿಸಿದವರು ಯಾರು ?

A) ಟಿ.ಎಫ್. ಬೋರ್ಡಿಲನ್
B) ಎಚ್.ವಿ. ಕನೊಲಿ
C) ಚಾತು ಮೆನೊನ್
D) ಬ್ರಾಂಡಿಸ್

100. ದೃಢದಾರು ಮರಕ್ಕೆ ಉದಾಹರಣೆ

A) ಕಬ್ಬು
B) ಹಾಲ್ಮಡ್ಡಿ (ಐಲಾಂತಸ್)
C) ಇಲವು
D) ತೇಗ

---